ಮಾತ್ರವಲ್ಲ ಪರಿಸ್ಥಿತಿಯೇ ಒತ್ತಾಯಿಸುವ ಪಲಾಯನವಾದದ ಸಾಧ್ಯತೆಯನ್ನೂ ನಮಗೆ ಮನದಟ್ಟು ಮಾಡಿಕೊಡುತ್ತದೆ. ಇದಕ್ಕೆ ಕಾರಣವೆಂದರೆ, ಹೆಣ್ಣುಮಕ್ಕಳಿಗೆ ಆಯ್ಕೆಯ ಬದುಕನ್ನು ಕುರಿತಂತೆ ಇದ್ದ ಮೋಹಕ್ಕೆ ಸಮನಾದ ಮಾನಸಿಕ ತಯಾರಿ ಇರಲಿಲ್ಲ ಎನ್ನುವುದು. ಇದು ಆಯಾ ವ್ಯಕ್ತಿಗಳನ್ನು ಕುರಿತ ಟೀಕೆಯೆಂದು ತಿಳಿಯಬಾರದು. ಇದು ಮೂಲತಃ ಗಂಡಾಳಿಕೆಯು ಹೇರಿದ, ರೂಪಿಸಿದ ಮನಃಸ್ಥಿತಿಯಿಂದ ಹೊರಬರುವುದು ಎಷ್ಟು ಕಷ್ಟ ಎನ್ನುವುದನ್ನು ತಿಳಿಸುತ್ತದೆ. ಹೆಣ್ಣಿಗೆ ತನ್ನ ಬಗ್ಗೆಯೇ ಅಪನಂಬಿಕೆ ಹುಟ್ಟಿಸಿದ, ಅವಳಲ್ಲಿ ಆತ್ಮಘನತೆಯೇ ಇರದಂತೆ ನೋಡಿಕೊಂಡ ವ್ಯವಸ್ಥೆಯ ಎದುರು ತನ್ನ ಬದುಕಿನ ಜವಾಬ್ದಾರಿಯನ್ನು ತಾನೇ ಹೊರುವುದರಲ್ಲಿ ಹಿಂಜರಿದರು. ಮೌಲ್ಯವ್ಯವಸ್ಥೆಯು ಮದುವೆಯಾಚೆಗಿನ ಸಂಬಂಧವನ್ನೋ, ಮರು ಮದುವೆಗಳನ್ನೋ ಒಪ್ಪಲಾರದು ಎನ್ನುವ ಅರಿವಿನಲ್ಲಿ ಅವರು ಇವುಗಳನ್ನು ಗಂಡಿನ ಸ್ವಾರ್ಥ ಮತ್ತು ಮೋಸದ ಕಥನಗಳಾಗಿ ನಿರೂಪಿಸಲು ಪ್ರಯತ್ನಿಸಿದರು. ಇದರಲ್ಲಿ ತನ್ನ ಪಾತ್ರವೂ ಪಾಲೂ ಇದೆಯಲ್ಲ ಎನ್ನುವುದನ್ನು ಆದಷ್ಟೂ ನೇಪಥ್ಯದಲ್ಲಿರಿಸಿ ತಾವು ಮುಗ್ಧರೂ, ಅವರ ಕಪಟವನ್ನರಿಯದ ಸೀದಾ ಸಾದಾ ವ್ಯಕ್ತಿಗಳೂ ಆಗಿದ್ದರೆನ್ನುವುದನ್ನು ಒತ್ತಿ ಹೇಳುತ್ತಾ ಹೋಗುತ್ತಾರೆ. ಇದು ಮಹತ್ವದ ಅಂಶ ಎಂದು ನಾನು ಹೇಳುತ್ತಿರುವುದು ಯಾಕೆಂದರೆ, ಯಾವ ಶಿಕ್ಷಣ ಮತ್ತು ಉದ್ಯೋಗಗಳು ಹೆಣ್ಣನ್ನು ಮನೋದೈಹಿಕ, ಬೌದ್ಧಿಕ ದಾಸ್ಯಗಳಿಂದ ಬಿಡಿಸಬಲ್ಲವು ಎಂದು ತಿಳಿದುಕೊಂಡಿದ್ದೆವೋ ಅವು ನಿಜದಲ್ಲಿ ಆ ಶಕ್ತಿಯನ್ನು ಪಡೆದಿರಲಿಲ್ಲ ಎನ್ನುವುದನ್ನು ಈ ಆತ್ಮಕಥನಗಳು ಖಚಿತವಾಗಿ ಸ್ಥಾಪಿಸುತ್ತವೆ. ಹೆಣ್ಣಿನ ಸಂಕಥನದ ಒಂದೊಂದು ಹೆಜ್ಜೆಯೂ ಮುಖ್ಯವಾಗುವುದು ಈ ಕಾರಣಕ್ಕೆ. ಹೆಣ್ಣು ಲೋಕವನ್ನು ಮಾತ್ರವಲ್ಲ, ಅವಳು ಎದುರಿಸಬೇಕಾಗಿರುವುದು ತನ್ನದೇ ಒಳಲೋಕವನ್ನು, ಮನೋಲೋಕವನ್ನು. ಕಾರಣವಿದ್ದು ಇಲ್ಲದೆ ಅವಳು ತಾನೇ ಹಾಕಿಕೊಂಡ ಬಂಧನಗಳಿಂದ ನರಳುತ್ತಾಳೆ. ಇಲ್ಲಿ ಎರಡು ವರ್ಗದವರನ್ನು ಪ್ರಧಾನವಾಗಿ ನಾವು ಗುರುತಿಸಬಹುದು. ಶಶಿಕಲಾ ವೀರಯ್ಯಸ್ವಾಮಿ ಅವರ ಆತ್ಮಕಥನವನ್ನು ಮೊದಲ ವರ್ಗದ ಪ್ರಾತಿನಿಧಿಕ ಆತ್ಮಕಥನವಾಗಿ ನೋಡಬಹುದು. ಕೌಟುಂಬಿಕ ಬಂಧನ ಮತ್ತು ತನ್ನಾಸೆಯ ಬದುಕಿನ ನಡುವೆ ತೂಗಿ ತೂಗಿ ಸಾಕಾಗಿ ತನ್ನಾಸೆಯ ಬದುಕನ್ನು ಕಟ್ಟಿಕೊಳ್ಳಲು ಧೈರ್ಯ ಮಾಡಿದ ಆದರೆ ಅದನ್ನು ದಕ್ಕಿಸಿಕೊಳ್ಳಲಾಗದಿದ್ದಾಗ ಅದರ ಹೊಣೆಯನ್ನು ಯಾರು ಹೊರಬೇಕು ಎನ್ನುವ ವಾಸ್ತವದ ಪ್ರಶ್ನೆಗೆ ಅವರು ನೇರವಾಗಿ ಮತ್ತು ಇಡಿಯಾಗಿ ನಮ್ಮ ಸಾಮಾಜಿಕ ಮೌಲ್ಯವ್ಯವಸ್ಥೆಯನ್ನು ಗುರಿ ಮಾಡುತ್ತಾರೆ. ಇದರ ಅರ್ಧ ಭಾಗದ ಹೊಣೆ ತನ್ನದೂ ಆಗಬೇಕು ಎನ್ನುವ ಸತ್ಯದ ಮುಖಾಮುಖಿಗೆ ಇವರು ಹಿಂಜರಿಯುತ್ತಾರೆ. ಗುಡಿಹಳ್ಳಿ ನಾಗರಾಜ್ ಅವರು ನಿರೂಪಿಸಿರುವ ರಂಗಮಹಿಳೆಯರ ಜೀವನ ಚರಿತ್ರೆಗಳು ವಾಸ್ತವದ ಇನ್ನೊಂದು ಕರಾಳ ಮುಖಕ್ಕೆ ಕನ್ನಡಿ ಹಿಡಿಯುತ್ತವೆ. 'ಹೆಣ್ಣೆಂಬ ಶಬುದ'ಕ್ಕೆ ಏನೇನು ಅರ್ಥಗಳಿವೆ ಎನ್ನುವುದನ್ನು ಇವುಗಳನ್ನೂ ಓದಿಯೇ ತಿಳಿಯಬೇಕು. ಪ್ರತಿಭೆ, ಆತ್ಮಬಲ ಏನಿದ್ದೂ ಹೆಣ್ಣನ್ನು ಹೆಣ್ಣೆನ್ನುವ ಒಂದೇ ಕಾರಣಕ್ಕೆ ನುಂಗಿ ನೊಣೆಯುವ ಕಬಂಧ ಬಾಹುಗಳಲ್ಲಿ ಬದುಕು ಕಳೆದೂ ಕಲೆಯನ್ನೇ ಎಲ್ಲದಕ್ಕೂ

